## ಪದಬಂಧ



**ಎಡದಿಂದ ಬಲಕ್ಕೆ**

1. ಸಂತರ ಸಹವಾಸದಿಂದ ಸಿಕ್ಕೀತೇ ಆನಂದ? 3
3. ಮಹಾ ಗರ್ವಿಯಾಗಿದ್ದವನಿಗೆ ಈಗ ಎಲ್ಲದರಲ್ಲೂ ತ್ಯಾಜ್ಯಭಾವ 3
4. ವ್ಯವಹಾರದ ನಡುವೆಯೇ ಸ್ವಲ್ಪ ಕಾಲ ರಂಜನೀಯ ಓಡಾಟ 3
6. ಭಯವಿಲ್ಲದ ಶುದ್ಧ ಪರಿಸರದ ಮಂಗಳಕರ ಆರಂಭ ಬಂದಿದೆ 4
7. ವೀರರ ಕಥೆಗಳ ಪುಸ್ತಕಗಳನ್ನು ಎಲ್ಲೆಡೆ ಹಂಚುವವ ಈತ 4
9. ಮಾಲೆ ಕಟ್ಟುವ ಆತ ಲಲಿತ ವಿದ್ಯಾ ಪರಿಣತ ಕೂಡ 4
11. ಸಂಪಾದನೆಯನ್ನೆಲ್ಲ ದಾನ ಮಾಡುವುದೇ ಅವರ ಪದ್ಧತಿ 4
15. ಮೇರು ಶಿಖರವನ್ನು ಮೊದಲಿಗೆ ಮುಟ್ಟಿ ಬಂದವ 'ಲಕ್ಷ್ಮಿಯ ಪತಿ' 3
16. ಎಂಥ ರೌದ್ರಾವತಾರವನ್ನು ತಾಳಿದರೂ ಮೈಯಲ್ಲಿನ ರಕ್ತ ಅದೇ 3
17. ಮಳೆಯ ಆಗಮನದ ಮುನ್ಸೂಚನೆಯನ್ನು ಗುರುತಿಸಿದ್ದು ಇದೇ ಜೋಡಿ 3

**ಮೇಲಿನಿಂದ ಕೆಳಕ್ಕೆ**

1. ಗಡಿಯನ್ನು ದಾಟಿ ಹೋಗುವವರ ಜೊತೆಗೇ... 3
2. ವಿಶ್ರಾಂತಿಯೇ ಇಲ್ಲದ ವ್ಯೋಮ ಕಾಯ ನಮ್ಮ ಸೂರ್ಯ 3
3. ಆವೇಶದ ಮಾತುಗಳನ್ನಾಡಿದ್ದಕ್ಕೆ ಈಗ ದುಃಖವಾಗುತ್ತಿದೆ 3
5. ಶ್ರೇಷ್ಠ ತರ್ಜುಮೆದಾರರಿಗೆಲ್ಲ ನೀಡಿದ ಪದಕ ಬೆಳ್ಳಿಯದು 3
6. ಕನಸು ಕಾಣುತ್ತಿದ್ದವನ ನಿದ್ರಾ ಭಂಗ ಮಾಡಿತು ನಾಯಿ 3
8. ಕಡೆಯವರೆಗೂ ಎಷ್ಟೇ ಹುಡುಕಿದರೂ ಸಿಗದ ಹಂಡೆ 3
10. ಕಂತು ಕಟ್ಟಿ ಬರಲು ಏಕಿಂಥ ಆತುರ? 3
12. ಸಮಸ್ಯೆಯ ಪರಿಹಾರಕ್ಕೆ ಸಹಕರಿಸದೆ ಇದ್ದದ್ದಕ್ಕೆ ಏಟು! 3
13. ಆಶ್ರಯದಾತರ ಸಂಖ್ಯೆ ಅಧಿಕವಾಗಲೆಂಬುದೇ ಎಲ್ಲರ ಹಂಬಲ 3
14. ಮರಳುಗಾಡನ್ನು ಕಂಡ ಸ್ವಲ್ಪ ಹೊತ್ತಿನಲ್ಲೇ ಹುಚ್ಚನಾದ 3

---

### 05–10–2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಶುಭೋದಯ 3. ನಿಷಿದ್ಧ 4. ಮಾರುತ 6. ಹಣಬಲ 7. ಯದುಕುಲ 9. ರಹದಾರಿ 12. ಅನುಮತಿ 14. ಸುಲಭ 15. ಮಾರಕ 16. ಯಜಮಾನ

**ಮೇಲಿನಿಂದ ಕೆಳಕ್ಕೆ**

1. ಶುದ್ಧಜಲ 2. ಯಮಾಲಯ 3. ನಿಪುಣ 5. ತಳಕು 6. ಹರಿದ್ವಾರ 8. ಲಕ್ಷಪತಿ 10. ಹರಸು 11. ರಿಣಭಯ 12. ಅನುಮಾನ 13. ಮರುಕ

**ಪ್ರಶ್ನಾಂಕಣ**

# ಹಡಗು; ತಿಮಿಂಗಿಲ ಶತ್ರು ಹೇಗೆ?

ಕಳೆದ ಶತಮಾನ ತಿಮಿಂಗಿಲಗಳ ಪಾಲಿಗೆ ಕರಾಳ ಕಾಲ ಆಗಿತ್ತು. ಪ್ರಮುಖವಾಗಿ ಕೊಬ್ಬಿನ ಸಂಗ್ರಹಕ್ಕಾಗಿ ಮತ್ತು ಮಾಂಸಕ್ಕಾಗಿಯೂ ಆಗ ಈ ಮಹಾ ದೈತ್ಯ ಸಾಗರ ಸ್ತನಿಗಳ ಕ್ರೂರ ಕಗ್ಗೊಲೆ ಅವ್ಯಾಹತವಾಗಿ ನಡೆದಿತ್ತು. ಎಷ್ಟೆಂದರೆ 1901ರಿಂದ 1980ರವರೆಗಿನ ಎಂಬತ್ತೇ ವರ್ಷಗಳ ಅವಧಿಯಲ್ಲಿ ಕನಿಷ್ಠ 30 ಲಕ್ಷ ತಿಮಿಂಗಿಲಗಳ ಬೇಟೆ ನಡೆದಿತ್ತು! ತತ್ಪರಿಣಾಮವಾಗಿ, ವಿಶೇಷವಾಗಿ ಬೃಹತ್ ತಿಮಿಂಗಿಲಗಳು ಎಂದರೆ ನೀಲಿ ತಿಮಿಂಗಿಲ, ಸ್ಪರ್ಮ್ ತಿಮಿಂಗಿಲ, ಗೂನು ತಿಮಿಂಗಿಲ ಇತ್ಯಾದಿಗಳ ಸಂಖ್ಯೆ ಲಕ್ಷಾಂತರದಿಂದ ಕೇವಲ ನೂರಾರಕ್ಕೆ ಕುಸಿದಿತ್ತು; ಅನತಿ ಕಾಲದಲ್ಲೇ ಸಂಪೂರ್ಣ ಅಳಿದೇಹೋಗುವ ಸ್ಥಿತಿಯನ್ನು ತಲುಪಿತ್ತು. 1985ರಲ್ಲಿ ಜಾಗತಿಕ ಮಟ್ಟದಲ್ಲಿ ಜಾರಿಗೊಂಡ ತಿಮಿಂಗಿಲ ಬೇಟೆಯ ನಿಷೇಧದ ನಂತರ ತಿಮಿಂಗಿಲಗಳ ನೆಮ್ಮದಿ ಮತ್ತು ಸಂಖ್ಯೆ ಎರಡೂ ಚೇತರಿಸಿಕೊಂಡಿವೆ.

ಆದರೆ, 1992ರ ನಂತರ ಅಂತರ ರಾಷ್ಟ್ರೀಯ ವಾಣಿಜ್ಯದ ತೀವ್ರ ಅಭಿವೃದ್ಧಿಯಿಂದಾಗಿ ಕಡಲಿನಲ್ಲಿ ತಿಮಿಂಗಿಲಗಳನ್ನು ಬೇರೊಂದು ಪ್ರಬಲ ಶತ್ರು ಕಾಡಲು ತೊಡಗಿದೆ: ಭಾರೀ ಸಂಖ್ಯೆಯ ಹಡಗುಗಳ ಸಂಚಾರ. ಪ್ರತಿಯೊಂದೂ ಲಕ್ಷಾಂತರ ಟನ್ ತೂಕದ ತೈಲ ವಾಹಕ ಹಡಗುಗಳು, ಸರಕು ಸಾಗಾಣಿಕಾ ಹಡಗುಗಳು, ವಿಮಾನ ವಾಹಕ ಮತ್ತಿತರ ಮಿಲಿಟರಿ ಹಡಗುಗಳು, ಜಲಾಂತರ್ಗಾಮಿಗಳು, ಪ್ರವಾಸಿ ಕ್ರೂಸರ್‌ಗಳು, ಮೀನುಗಾರಿಕಾ ನೌಕೆಗಳು ಇತ್ಯಾದಿ ಕನಿಷ್ಠ ಒಂದು ಲಕ್ಷ ಭಾರೀ ಹಡಗುಗಳು ಹಗಲಿರುಳೆನ್ನದೆ ಎಲ್ಲ ಸಾಗರಗಳಲ್ಲೂ ಸಂಚರಿಸುತ್ತಿವೆ. ಉದ್ದೇಶರಹಿತವಾಗಿಯೇ ಆದರೂ ಪ್ರತಿ ದಿನ ಅವುಗಳ ಹಾದಿಗೆ ಅಡ್ಡ ಬರುವ ತಿಮಿಂಗಿಲಗಳಿಗೆ ಬಡಿಯುತ್ತಿವೆ. ಏಕೆಂದರೆ, ನೀರಲ್ಲಿ ಮುಳುಗಿ ಈಜುತ್ತ ಹಾದಿಗೆ ಅಡ್ಡ ಬರುವ ತಿಮಿಂಗಿಲಗಳು ಹಡಗುಗಳ ಚಾಲಕರಿಗೆ ಗೋಚರಿಸುವುದಿಲ್ಲ; ಗೋಚರಿಸಿದರೂ ಹಡಗನ್ನು ಕ್ಷಿಪ್ರವಾಗಿ ನಿಲ್ಲಿಸುವುದಾಗಲೀ, ತಕ್ಷಣ ಪಕ್ಕಕ್ಕೆ ತಿರುಗಿಸುವುದಾಗಲೀ ಸಾಧ್ಯವಿಲ್ಲ. ಹಡಗುಗಳಿಗೆ ದಾರಿ ಬಿಡಬೇಕೆಂಬುದು ತಿಮಿಂಗಿಲಗಳಿಗೂ ತಿಳಿದಿಲ್ಲ! ದುರಂತ ಏನೆಂದರೆ, ಪ್ರಸ್ತುತ ಹೀಗೆ ಹಡಗುಗಳ ಡಿಕ್ಕಿಯಿಂದ ಸಾಯುತ್ತಿರುವ ತಿಮಿಂಗಿಲಗಳ ಸಂಖ್ಯೆ ವರ್ಷಕ್ಕೆ ಸಮೀಪ ಇಪ್ಪತ್ತು ಸಾವಿರ (ಚಿತ್ರ ನೋಡಿ).



ಈ ನಿತ್ಯ ದುರಂತಗಳನ್ನು ತಪ್ಪಿಸುವುದು ಹೇಗೆ? ಹಡಗುಗಳ ಮಾರ್ಗಗಳನ್ನು ತಿಮಿಂಗಿಲಗಳ ವಲಸೆ ಹಾದಿಗಳಿಂದ ಮತ್ತು ಅವುಗಳ ಬೇಟೆಯ ನೆಲೆಗಳಿಂದ ದೂರ ಇರುವಂತೆ ಬದಲಿಸುವುದು, ತಿಮಿಂಗಿಲಗಳು ಗುಂಪುಗೂಡುವ ನೆಲೆಗಳಲ್ಲಿ ಹಡಗುಗಳ ವೇಗಕ್ಕೆ ಮಿತಿಯನ್ನು ಹಾಕುವುದು, ಉಪಗ್ರಹಗಳ ನೆರವಿನಿಂದ ಹಡಗುಗಳಿಗೆ ಅವುಗಳ ಹಾದಿಯಲ್ಲಿರುವ ತಿಮಿಂಗಿಲಗಳ ಬಗೆಗೆ ಮುನ್ಸೂಚನೆಯನ್ನು ಒದಗಿಸುವುದು... ಇತ್ಯಾದಿ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದರಷ್ಟೇ ದುರಂತಗಳನ್ನು ಕಡಿಮೆಗೊಳಿಸುವುದು ಸಾಧ್ಯ.

**ಎನ್. ವಾಸುದೇವ್**